## ನಗರಾಭಿವೃದ್ಧಿ ಇಲಾಖೆ

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ, ಇವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಿಕೆ ಉತ್ತರ.

---

**ವಿ ಷ ಯ :**

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ಪೌರಕಾರ್ಮಿಕರನ್ನು ಖಾಯಂಗೊಳಿಸಲು ಆದೇಶ ನೀಡಿಯೂ ಅದನ್ನು ಅನುಷ್ಠಾನಗೊಳಿಸದಿರುವುದರಿಂದ ಅನೇಕರು ಮರಣ ಹೊಂದಿದ ನಂತರ ಪರಿಹಾರವನ್ನು ಪಡೆಯಲು ಅಡ್ಡಿಯಾಗಿರುತ್ತದೆ. ಆದುದರಿಂದ ಸದರಿಯವರ ಕುಟುಂಬಗಳಿಗೆ ಶೀಘ್ರವಾಗಿ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದ ಬಗ್ಗೆ.

**ಉ ತ್ತ ರ :**

ಮಂಗಳೂರು ಮಹಾನಗರಪಾಲಿಕೆಯ ಆಯುಕ್ತರ ನಡವಳಿ ಸಂಖ್ಯೆ: ಇಎಸ್‌ಟಿ5/ಸಿಆರ್17/2000-01 ದಿನಾಂಕ: 03-05-2000 ರಂತೆ 64 ಜನ ದಿನಗೂಲಿ ಪೌರಕಾರ್ಮಿಕರನ್ನು ದಿನಾಂಕ: 01-05-2000 ರಿಂದ ಅನ್ವಯವಾಗುವಂತೆ ಸಕ್ರಮಗೊಳಿಸಿ ಆಯುಕ್ತರು ಆದೇಶ ಹೊರಡಿಸಿರುತ್ತಾರೆ.

ಮಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಸದರಿ ಆದೇಶವನ್ನು ಹೊರಡಿಸುವ ಪೂರ್ವದಲ್ಲಿ ಸರ್ಕಾರದ ಅನುಮೋದನೆ ಪಡೆದಿರುವುದಿಲ್ಲ. ಇದೇ ವಿಚಾರವಾಗಿ ಆಯುಕ್ತರ ವಿರುದ್ಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವತಿಯಿಂದ ಶಿಸ್ತಿನ ಕ್ರಮ ಸಹ ಕೈಗೊಳ್ಳಲಾಗಿರುತ್ತದೆ.

ಆದಾಗ್ಯೂ, ಈ ಪ್ರಕರಣದ ಬಗ್ಗೆ ನಂತರದ ದಿನಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಆ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಮತ್ತು ಈ ಬಗ್ಗೆ ಹೆಚ್ಚಿನ ಮಾಹಿತಿ / ದಾಖಲೆ / ಸ್ಪಷ್ಟೀಕರಣ ಅಗತ್ಯವೆನಿಸಿದಲ್ಲಿ, ಅದನ್ನು ಪಾಲಿಕೆಯ ವತಿಯಿಂದ ಪಡೆದು, ಸಕ್ರಮಾತಿ ಬಗ್ಗೆ ಇರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿರುವ ಆದೇಶ, ಮಾರ್ಗಸೂಚಿ ಇತ್ಯಾದಿಗಳಡಿ ಪರಿಶೀಲಿಸಿ, ಅಗತ್ಯವೆನಿಸಿದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಕ್ರಮವಹಿಸಲಾಗುವುದು.

ನಅಇ 21 ಎಂಎಂಸಿ 2020ಇ

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು